ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5, Special Issue-1, Sep-Oct, 2023, Pp. 105-112.**
**©IIMRD, Mysuru.**

**www.iimrd.com**

# ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಚಿಂತನೆ

**ಪ್ರವೀಣ್ ಕುಮಾರ್. ಜೆ* ಮತ್ತು ಡಾ. ವನಜಾಕ್ಷಿ ಹಳ್ಳಿಯವರ****

*ಎಂ.ಕಾಂ ವಿದ್ಯಾರ್ಥಿ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು.

**ಪ್ರಾಂಶುಪಾಲರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಸರ್ಕಾರಿ ಪ್ರಥಮದರ್ಜೆ ಕಾಲೇಜು, ರಾಜಾಜಿನಗರ, ಬೆಂಗಳೂರು.

***ಸಾರಾಂಶ: (Abstract)***

*'ವಚನ'ದ ಹಾಗೆ 'ಕೀರ್ತನ'ವೂ ಕನ್ನಡದಲ್ಲಿ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ. ಇದನ್ನು ದೇವರನಾಮ, ದಾಸಸಾಹಿತ್ಯ, ದಾಸವಾಙ್ಮಯ ಎಂಬಿತ್ಯಾದಿ ಹೆಸರುಗಳಿಂದ ಕರೆಯುವುದು ವಾಡಿಕೆಯಾಗಿದೆ. 'ಕೀರ್ತನೆ' ಎಂದರೆ ವರ್ಣನೆ, ಹೊಗಳು, ಕೀರ್ತಿಸು, ಭಜಿಸು ಎಂಬ ಮೊದಲಾದ ಅರ್ಥಗಳುಂಟು. ಭಕ್ತನೊಬ್ಬ ಭಗವಂತನನ್ನು ಈ ರೀತಿ ಹಾಡಿ ಹೊಗಳುವ ಹಿಂದಿನ ಉದ್ದೇಶ ಪ್ರಾಪಂಚಿಕ ಸುಖಗಳ ಬಂಧನದಿಂದ ತನ್ನನ್ನು ತಾನು ಹಂತ ಹಂತವಾಗಿ ಬಿಡಿಸಿಕೊಳ್ಳುವ ಪ್ರಯತ್ನ ಹಾಗೂ ಪಾಡು. ಭಕ್ತನ ಈ ಪಾಡು ಕ್ರಮೇಣವಾಗಿ ಹಾಡಾಗುವ ಹಾದಿಯಲ್ಲಿ ಕೀರ್ತನೆಗಳೆಂಬ ಹೂಗಳು ಅರಳಿ ಹರಳುಗಟ್ಟಿ ನಿಂತಿವೆ! ಮಾಧ್ವಮತ ಸಂಪ್ರದಾಯದ ಈ ಕೀರ್ತನ ಸಾಹಿತ್ಯಕ್ಕೆ ಮೂಲ ಪ್ರೇರಣೆ ಮಧ್ವಾಚಾರ್ಯರ 'ದ್ವಾದಶ ಸೂತ್ರ'ವಾಗಿದೆ. ಮದ್ವಾಚಾರ್ಯರ ಶಿಷ್ಯರಾದ ನರಹರಿತೀರ್ಥರು (ಕ್ರಿ.ಶ.1275) ದಾಸಕೂಟದ ಸ್ಥಾಪಕರು ಮತ್ತು ಆ ಮೂಲಕ ಕೀರ್ತನ ಸಾಹಿತ್ಯಕ್ಕೆ ನಾಂದಿ ಹಾಡಿದವರು. ಅವರ ಶಿಷ್ಯರಾದ ಶ್ರೀಪಾದರಾಯರು (ಕ್ರಿ.ಶ.1500) ಅದಕ್ಕೊಂದು ಭದ್ರವಾದ ಬುನಾದಿಯನ್ನು ಹಾಕಿದವರು. ಇವರ ಶಿಷ್ಯರಾದ ವ್ಯಾಸರಾಯರು (ಕ್ರಿ.ಶ.1525) ತಮ್ಮ ಗುರುಗಳ ಮಾರ್ಗವನ್ನೇ ಅನುಸರಿಸಿ ಕೀರ್ತನ ಸಾಹಿತ್ಯವನ್ನು ಪೋಷಿಸಿ ಬೆಳೆಸಿದವರು. ಅವರ ಪ್ರಿಯ ಶಿಷ್ಯರಾದ ಪುರಂದರ–ಕನಕರು ಅದೇ ಮಾರ್ಗದಲ್ಲಿ ಮುನ್ನಡೆದು ಉತ್ಕೃಷ್ಟತೆಯನ್ನು ಮೆರೆದವರು. ಕೀರ್ತನ ಸಾಹಿತ್ಯದ 'ಅಶ್ವಿನಿ ದೇವತೆ'ಗಳೆಂದು ಹೆಸರಾದವರು.*

***ಮುಖ್ಯಪದಗಳು (Keywords)*** *ಕನಕದಾಸರು, ಕೀರ್ತನೆಗಳು,* ಸಂಸ್ಕಾರ, *ಆದಿಕೇಶವನ ದೇವಾಲಯ,.*

## ಪೀಠಿಕೆ

ಕೀರ್ತನ ಸಾಹಿತ್ಯದಲ್ಲಿ ಪುರಂದರದಾಸರಷ್ಟೇ ಪ್ರಖ್ಯಾತರೂ, ಕವಿಗಳೂ ಅವರ ಸಮಕಾಲೀನ ಆಪ್ತ ಸ್ನೇಹಿತರೂ ಆದ ಕೀರ್ತನಕಾರರೆಂದರೆ ಕನಕದಾಸರು. ಇವರ ಕಾಲ ಕ್ರಿ.ಶ.1550. ಹಾವೇರಿ ಜಿಲ್ಲೆಯ ಬಾಡ ಅವರ ಹುಟ್ಟಿದ ಊರು. ತಿರುಪತಿ ತಿಮ್ಮಪ್ಪನ ವರಪ್ರಸಾದದಿಂದ ಹುಟ್ಟಿದುದರಿಂದಾಗಿ 'ತಿಮ್ಮಪ್ಪ' ಎಂಬುದು

*Please cite this article as:* ಪ್ರವೀಣ್ ಕುಮಾರ್. ಜೆ. ಮತ್ತು ಡಾ. ವನಜಾಕ್ಷಿ ಹಳ್ಳಿಯವರ. (2023). ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಚಿಂತನೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.105–112.*

ಅವರ ತಂದೆ–ತಾಯಿಗಳು ಅವರಿಗಿಟ್ಟ ಜನ್ಮನಾಮ. ತಂದೆ ಕುರುಬ ಮತಕ್ಕೆ ಸೇರಿದ ಬಾಡದ ಪಾಳೇಯಗಾರನಾದ ಬೀರಪ್ಪ ನಾಯಕ, ತಾಯಿ ಬಚ್ಚಮ್ಮ. ಆಕಸ್ಮಿಕವಾಗಿ ದೊರೆತ ಅಪಾರ ಧನರಾಶಿಯಿಂದಾಗಿ ತಿಮ್ಮಪ್ಪ ನಾಯಕ ಕನಕನಾಯಕರಾದರು. ಕಾಗಿನೆಲೆಯಲ್ಲಿ ತಮ್ಮ ಆರಾಧ್ಯ ದೈವವಾದ ಆದಿಕೇಶವನ ಮತ್ತು ನರಸಿಂಹದೇವಾಲಯಗಳನ್ನು ನಿರ್ಮಿಸಿದರು. ಬದುಕಿನ ಯಾವುದೋ ಒಂದು ತಿರುವಿನಲ್ಲಿ ವೈರಾಗ್ಯ ತಾಳಿ ಎಲ್ಲವನ್ನೂ ತ್ಯಜಿಸಿ ವಿಜಯನಗರಕ್ಕೆ ಬಂದು, ವ್ಯಾಸರಾಯರ ಪ್ರಿಯ ಶಿಷ್ಯರಾಗಿ ದಾಸಕೂಟವನ್ನು ಸೇರಿ 'ಕನಕದಾಸ'ರೆನಿಸಿದರು. 'ಕಾಗಿನೆಲೆಯಾದಿಕೇಶವ' ಎಂಬುದು ಅವರ ಕೀರ್ತನೆಗಳ ಅಂಕಿತವಾಗಿದೆ.

ಕನಕದಾಸರು ಕೀರ್ತನೆಗಳೊಂದಿಗೆ ಉಗಾಭೋಗ, ಸುಳಾದಿಗಳನ್ನೂ ಮೋಹನ ತರಂಗಿಣಿ, ಹರಿಭಕ್ತಿ ಸಾರ, ರಾಮಧಾನ್ಯ ಚರಿತ್ರೆ, ನಳಚರಿತ್ರೆ, ನೃಸಿಂಹಸ್ತವ (ಅನುಪಲಬ್ಧ) ಎಂಬ ಕೃತಿಗಳನ್ನೂ ಬೆಡಗಿನ ವಚನಗಳಂತಹ ಮುಂಡಿಗೆಗಳನ್ನೂ ರಚಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇಷ್ಟೊಂದು ವಿಸ್ತೃತವಾದ ಅವರ ಸಾಹಿತ್ಯ ಕೃಷಿಯಲ್ಲಿ ಕೀರ್ತನೆ (ಪ್ರಮುಖ)ಗಳನ್ನು ಮಾತ್ರ ಕೇಂದ್ರೀಕರಿಸಿ ಕೀರ್ತನೆಗಳಲ್ಲಿ ಸಾಮಾಜಿಕ ಚಿಂತನೆಯ ಅಂಶಗಳನ್ನು ಕುರಿತು ಅವಲೋಕಿಸುವ ಪ್ರಯತ್ನ ಮಾಡಲಾಗಿದೆ.

"ಭಾಗವತ ಮನೋಧರ್ಮದ ಕನಕದಾಸರ ಸಾಮಾಜಿಕ ಚಿಂತನೆ ಆಧ್ಯಾತ್ಮಿಕ ತಳಹದಿಯ ಮೇಲೆಯೇ ಅನಾವರಣಗೊಳ್ಳುವಂತಹದ್ದು. ದ್ವೈತ ಮತಭಾವದ ಹರಿನಾಮ ಸ್ಮರಣೆಯಿಂದ ಆರಂಭವಾದ ಅವರ ಸಾಧನೆ ಭಕ್ತಿಯ ಆರ್ದತೆ, ಆತ್ಮ ಶೋಧನೆ, ಆತ್ಮ ಸಮರ್ಪಣೆ ಸಾಮಾಜಿಕ ಅಗ್ನಿ ದಿವ್ಯಗಳ ಮೂಲಕ ಹಾಯ್ದು ಅದ್ವೈತ ಸಿದ್ಧಿಯ ಪರಮ ಗುರಿಯನ್ನು ತಲುಪಿದೆ."[1] ಕನಕದಾಸರು ಕೌಟುಂಬಿಕ ಬದುಕು ಹಾಗೂ ಸಾಮಾಜಿಕ ಸ್ಥಿತಿ–ಗತಿಗಳನ್ನು ತೆರೆದ ಕಣ್ಣಿನಿಂದ ಕಂಡು, ಬಿಚ್ಚು ಮನದಿ ಅನುಭವಿಸಿದವರು. ಅವರ ಅನುಭವ ಲೋಕ ವಿಸ್ತಾರ ಹಾಗೂ ವೈವಿಧ್ಯಮಯವಾದುದು. ಸಮಾಜದಲ್ಲಿ ಕಾಣುವ ಸರಿ–ತಪ್ಪು, ಒಳಿತು–ಕೆಡುಕು, ನೋವು–ನಲಿವು, ನ್ಯಾಯ–ಅನ್ಯಾಯ, ನೀತಿ–ಅನೀತಿ, ಪ್ರಾಮಾಣಿಕತೆ–ಅಪ್ರಾಮಾಣಿಕತೆ, ನಿಷ್ಠೆ–ಮೋಸ, ವಂಚನೆಗಳೆಲ್ಲವನ್ನೂ ಪ್ರತ್ಯಕ್ಷ ಜ್ಞಾನದಿಂದ ಕಂಡುಂಡವರು. ಹೀಗಾಗಿ ಇವರ ಕೀರ್ತನೆಗಳಲ್ಲಿ ವೈಯಕ್ತಿಕ ವಿಕಾಸಕ್ಕಾಗಿ ಭಕ್ತಿಯ ಬೋಧನೆಯೊಂದಿಗೆ ಸಾಮಾಜಿಕ ಜಾಗೃತಿಯೂ ಒಡಮೂಡಿದೆ. ವ್ಯಕ್ತಿಯ ಬದುಕಿನ ಸಾರ್ಥಕತೆಗೆ ಅಗತ್ಯವಾದ ಕ್ರಮಗಳನ್ನು ಅವರ ಬಹುತೇಕ ಕೀರ್ತನೆಗಳಲ್ಲಿ ಕಾಣಬಹುದು.

***"ಕುಲಕುಲಕುಲವೆನ್ನುತಿಹರು***
***ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ ॥ ಪ ॥***
***ಕೆಸರೊಳು ತಾವರೆ ಪುಟ್ಟಲು ಅದ ತಂದು***
***ಬಿಸಜನಾಭನಿಗರ್ಪಿಸಲಿಲ್ಲವೆ?***
***ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು***
**ವಸುಧೆಯೊಳಗೆ ಭೂಸುರರುಣಲಿಲ್ಲವೆ?**
***ಮೃಗಗಳ ಮೈಯಲ್ಲಿ ಪುಟ್ಟಲು ಕಸ್ತೂರಿ***
***ತೆಗೆದು ಪೂಸುವರು ದ್ವಿಜರೆಲ್ಲರು***
***ಬಗೆಯಿಂದ ನಾರಾಯಣನಾವ ಕುಲವಯ್ಯ?***

*ಜಗವಲ್ಲಭನಾವ ಕುಲ ಪೇಳಿರಯ್ಯಾ?*
*ಆತ್ಮ ಯಾವ ಕುಲ ಜೀವ ಯಾವ ಕುಲ*
*ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯಾ*
*ಆತ್ಮ ಮಹಾತ್ಮನ ನೆಲೆಯಾದಿಕೇಶವ*
*ಆತನೊಲಿದ ಮೇಲೆ ಯಾತರ ಕುಲವಯ್ಯ"* ***(ಈಸಬೇಕು ಇದ್ದು ಜಯಿಸಬೇಕು: ಪುಟ–52)***

ಮೇಲಿನ ಕೀರ್ತನೆಯಲ್ಲಿ ಕುಲವ್ಯಾವುದು? ಎಂದು ಪ್ರಶ್ನಿಸುತ್ತಲೇ ಜಾತಿ ವ್ಯವಸ್ಥೆಯನ್ನು ಕಂಡು ಗುಡುಗಿದ್ದಾರೆ. ಕೆಸರಿನಲ್ಲಿ ಹುಟ್ಟಿದ ತಾವರೆ, ಹಸುವಿನ ಕೆಚ್ಚಲಿನಲ್ಲಿ ಉತ್ಪತ್ತಿಯಾದ ಕ್ಷೀರ, ಮೃಗಗಳ ಮೈಯಲ್ಲಿ ಹುಟ್ಟಿದ ಕಸ್ತೂರಿಗಳೆಲ್ಲವನ್ನೂ ಭೂಮಿಯಲ್ಲುದಿಸಿದ ದೇವಬ್ರಾಹ್ಮಣರು ಉಪಯೋಗಿಸುವುದಿಲ್ಲವೆ? ಅಷ್ಟಕ್ಕೂ 'ಜೀವಾತ್ಮ' ಯಾವ ಕುಲ ಹೇಳಿದರೆಂದು ಸವಾಲು ಹಾಕುತ್ತಾರೆ. ಜಾತಿ ವ್ಯವಸ್ಥೆ ಬಗ್ಗೆ ಮಾತನಾಡುವಾಗ "ಕನಕದಾಸನ ದನಿ ಕೇವಲ ವಿಷಾದ ಪೂರ್ಣವಾಗುವುದಿಲ್ಲ; ಅದರಲ್ಲಿ ಉದಾತ್ತ ಸಿಟ್ಟು ಇದೆ. ಇದೇ ಅವನ ಅಭಿವ್ಯಕ್ತಿಗೆ ಹೆಚ್ಚು ನಿಖರತೆಯನ್ನು ತಂದು ಕೊಡುವುದು. ಈ ಜಾತಿ ಸಮಸ್ಯೆ ಉಪದೇಶ ಮಾತ್ರವಾದ ಸಾರ್ವತ್ರಿಕ ಜಾಡ್ಯವಾಗಷ್ಟೇ ಅವನಿಗೆ ಕಾಣುತ್ತಿಲ್ಲ. ಅವನಿಗಿದು ವೈಯಕ್ತಿಕ ಸಮಸ್ಯೆ ಆಗಿದೆ. ಅದು ಅವನ ಉಸಿರು ಕಟ್ಟಿಸುತ್ತಿರುವುದರಿಂದಲೇ ಜಾತಿಯ ಆಳ–ಅಗಲಗಳನ್ನು, ಅದರ ಸೋಗಿನಲ್ಲಿ ನಡೆದಿರುವ ಇಬ್ಬಂದಿ ತನವನ್ನು ಹೆಚ್ಚು ಸ್ಪರ್ಶಿಸಿ ಛಾಪಿಸುತ್ತಾನೆ."[2]

ಉನ್ನತ ಕುಲದವರಿಂದ ಸಾಕಷ್ಟು ಅಪಮಾನಕ್ಕೊಳಗಾಗಿದ್ದ ಕನಕದಾಸರು ಜಾತಿ ವ್ಯವಸ್ಥೆಗೊಂದು ಸಮಾನತೆಯ ಚಿಕಿತ್ಸಕ ಔಷಧಿಯ ಅಗತ್ಯವಿರುವುದನ್ನು ಸೂಚಿಸುತ್ತ, ಸುಖೀ ಸಮಾಜ ನಿರ್ಮಾಣವಾಗಲು ಹಂಬಲಿಸಿದರು. ಕನಕದಾಸರಿಗೆ ಕುಲದ ಪ್ರಶ್ನೆ "ಒಂದು ಅಮೂರ್ತ ವೈಚಾರಿಕ ವಿಷಯವಾಗಿರದೆ, ದಲಿತೋದ್ಧಾರದ ಡಾಂಭಿಕ ತೋರಿಕೆಯಾಗಿರದೆ, ಸ್ವಾನುಭವದ ವಾಸ್ತವ ಬಿಸಿಯಾಗಿತ್ತು. ಆದುದರಿಂದಲೇ, ಅವರು ವರ್ಣವ್ಯವಸ್ಥೆಯ ಲೋಪದೋಷಗಳನ್ನು, ಸಮಾಜದ ಅವ್ಯವಸ್ಥೆಗಳನ್ನು ಖಂಡಿಸಿ ಬರೆಯುವಾಗ ಹುಟ್ಟಿನಿಂದಾದ ಕುಲ ಕುಲವಲ್ಲ ಎಂಬುದನ್ನು ಸಾಧಿಸುವುದರ ಕಡೆಯೇ ಅವರ ಒತ್ತು ಬೀಳುತ್ತದೆ".[3]

***"ಹ್ಯಾಂಗೆ ನೀ ದಾಸನಾದೀ ಪ್ರಾಣಿ? ॥ ಪ ॥***
***ಹ್ಯಾಂಗೆ ನೀ ದಾಸನಾದಿ, ಹಿಂದೆ ಸಂಸಾರದೊಳು***
***ಮಂಗನಂದದಿ ಭಂಗವನು ಪಡುತ?" ॥ ಅ.ಪ ॥***
***ಆಸೆಯ ಬಿಡಲಿಲ್ಲ ಏನು ಧನಗಳಿಸಿದರು***
***ದೋಷಕೆ ಗುರಿಯಾಗಿ ಹೇಸಿಕೆಯೊಳು ಬಿದ್ದು***
***......................................................***
***ಕಾಲವ್ಯರ್ಥವ ಕಳೆದು ಕೆಡುವಂಥ ಕಪಟಿ ನೀ***
***ಉದರ ಪೋಷಣೆಗಾಗಿ ಅಧಮರನು ಯಾಚಿಸುತ***
***ಮದಗರ್ವವೆಂಬುದ ಬದಿಯಲಿಟ್ಟುಕೊಂಡು***
***......................................................***

*ಕಾಲುಗೆಜ್ಜೆಯ ಕಟ್ಟಿ ಮೇಲೆ ಕರತಾಳ ಪಿಡಿದು*
*ಶ್ರೀಲೋಲನ ಗುಣಪೊಗಳಿ ನಟಿಸುತಲಿ*
*......................................................*
*ಕಟ್ಟಿ ಕೈ ಪರರಲ್ಲಿ ಹೊಟ್ಟೆಗೋಸುಗ ಕಂ*
*ಗೆಟ್ಟು ಯಾಚಿಸುವ ಭ್ರಷ್ಟ ಪ್ರಾಣಿಯೆ ನೀ*
*................................................"* **(ಈಸಬೇಕು ಇದ್ದು ಜಯಿಸಬೇಕು: ಪುಟ–39)**

ಕನಕದಾಸರು ಇಲ್ಲಿ ಉತ್ತಮ ಗುಣಗಳನ್ನು ರೂಢಿಸಿಕೊಳ್ಳದ, ಸದ್ಗುಣ–ಸದಾಚಾರಗಳಿಲ್ಲದೆ ಡೊಂಗಿ ದಾಸನೊಬ್ಬನ ವಿಡಂಬನೆ ಮಾಡುತ್ತಾರೆ. ಮಂಗ–ಮಾನವನಾಗಿ ವಿಕಾಸ ಹೊಂದಿದ್ದೇ ಜ್ಞಾನ, ಸಚ್ಚಾರಿತ್ರ್ಯ, ಸದಾಚಾರದ ಅನುಸರಣೆಯಿಂದ. ಇಂಥಹ ಉತ್ತಮ ಗುಣಗಳ ಅನುಸರಣೆ ಇಲ್ಲದ ಮಾನವ ರೂಪದಲ್ಲಷ್ಟೇ ಮಾನವನಾಗಿ, ತನ್ನ ಪ್ರವೃತ್ತಿ–ವರ್ತನೆಯಲ್ಲಿ ಮಂಗನಾಗಿ ಉಳಿಯುವ ದುರವಸ್ಥೆ ಬಗ್ಗೆ ವಿಷಾದಿಸುತ್ತಾರೆ.

*"ಜಪವ ಮಾಡಿದರೇನು ತಪವ ಮಾಡಿದರೇನು ॥ ಪ ॥*
*ಕಪಟಗುಣ ವಿಪರೀತ ಕಲುಷವಿದ್ದವರು ॥ ಅ.ಪ ॥*
*......................................................*
*ನುಡಿ ನಡೆವ ಕಾಲದಲಿ ದಾನಧರ್ಮ ಮಾಡದೆ*
*......................................................*
*ಮಡದಿ ಮಕ್ಕಳಿಗೆಂದು ಒಡವೆ ವಸ್ತ್ರವಗಳಿಸೆ*
*ಪಿಡಿಯಲಾ ಯಮನವರ ಕಟ್ಟೆಗೊಳಗಾಗಿ"*
*......................................................*
*ಹೊಳೆಯೊಳಗೆ ಮುಳುಗಿ ಜಪತಪವಮಾಡಿ*
*ಕಳವಳಿಸಿ ನೂರೆಂಟು ತೊಳಲಿ ಬಳಲಬೇಡ*
*......................................................"* **(ಈಸಬೇಕು ಇದ್ದು ಜಯಿಸಬೇಕು: ಪುಟ–41)**

ಪರಿಶುದ್ಧವಿಲ್ಲದ ಮನಸ್ಸಿನಿಂದ ಹೊಳೆಯೊಳಗೆ ಮುಳುಗಿ, ಜಪ–ತಪ ಮಾಡುವುದರಿಂದ ಪ್ರಯೋಜನವಿಲ್ಲ. ಸಮಾಜದಲ್ಲಿರುವ ಕಡು–ಬಡವರಿಗೆ, ದೀನ–ದಲಿತರಿಗೆ ದಾನ–ಧರ್ಮವ ಮಾಡುವ ಗುಣ ರೂಢಿಸಿಕೊಳ್ಳಬೇಕಿದೆ. ತಾನು–ತನ್ನವರಿಗಾಗಿ ಮಾತ್ರ ಚಿಂತಿಸದೇ ಪರೋಪಕಾರದ ಬದುಕು ಕಟ್ಟಿಕೊಂಡಾಗ ಮಾತ್ರ ಭಗವಂತನ ಸಾಕ್ಷಾತ್ಕಾರವಾಗಲು ಸಾಧ್ಯ ಎನ್ನುತ್ತಲೇ ವ್ಯಕ್ತಿ ಹೇಗಿರಬೇಕು? ಎಂಬುದರ ಬಗ್ಗೆ ಚಿಂತನೆ ನಡೆಸುತ್ತಾರೆ.

*"ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ*
*ನಿತ್ಯ ಅನ್ನದಾನವಿರಲು ಭಯವು ಯಾತಕೆ ॥ ಪ ॥*
*ತಾನು ಉಣ್ಣದ ಪರರಿಗಿಕ್ಕದ ಧನವಿದ್ದ್ಯಾತಕೆ*
*ಮಾನಿನಿಯ ತೊರೆದ ಮೇಲೆ ಭೋಗವ್ಯಾತಕೆ*

*ಜ್ಞಾನವಿಲ್ಲದೆ ನೂರುಕಾಲ ಬದುಕಲ್ಯಾತಕೆ*
*ಮಾನ–ಹೀನನಾಗಿ ಬಾಳ್ವ ಮನುಜನ್ಯಾತಕೆ*

*ಮಾತು ಕೇಳದೆ ಮಲೆತು ನಡೆವ ಮಕ್ಕಳ್ಯಾತಕೆ*
*ಪ್ರೀತಿಯಿಲ್ಲದೆ ಎಡೆಯಲಿಕ್ಕಿದ ಅನ್ನ ವ್ಯಾತಕೆ*

*ನೀತಿಯರಿತು ನಡೆಯದಿರುವ ಭಂಟನ್ಯಾತಕೆ*
*ಸೋತು ಹೆಣ್ಣಿಗೆ ಹೆದರಿ ನಡೆವ ಪುರುಷನ್ಯಾತಕೆ*
*ಸನ್ನೆಯರಿತು ನಡೆಯದಿರುವ ಸತಿಯದ್ಯಾತಕೆ*
*ಮನ್ನಣೆಂದ ನಡೆಸದಿರುವ ದೊರೆಯಿದ್ಯಾತಕೆ*

*ಮುನ್ನಕೊಟ್ಟು ಪಡೆಯದಿನ್ನು ಬಯಸಲ್ಯಾತಕೆ*
*ಪ್ರಸನ್ನ ಆದಿಕೇಶವನಲ್ಲದೆ ದೈವವ್ಯಾತಕೆ"* *(ಕೀರ್ತನೆಗಳ ಸಂಗ್ರಹ: ಪುಟ–42)*

ಕನಕದಾಸರು ಇಲ್ಲಿ ಮನುಷ್ಯ ಪರೋಪಕಾರ, ಜ್ಞಾನಸಂಪಾದನೆ, ವಿನಯಶೀಲತೆ, ಕರ್ತವ್ಯನಿಷ್ಠೆ, ಗೌರವಾದರ, ಧೈರ್ಯ–ಸಾಹಸ, ನೀತಿಮಾರ್ಗ ಇವೇ ಮೊದಲಾದ ಗುಣಗಳನ್ನು ಅನುಸರಿಸಿ ಬದುಕು ನಿರ್ವಹಿಸಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ. ಸಂಗ–ಸಹವಾಸಗಳು ಎಂತಹದಿರಬೇಕು? ಎನ್ನವುದಕ್ಕೆ 'ದುರ್ಜನರ ಸಂಗ ನಾನೊಲ್ಲೆ' ಎಂಬ ಕೀರ್ತನೆಯಲ್ಲಿ ಸೂಕ್ತ ಉತ್ತರ ನೀಡುತ್ತಾರೆ. 'ನನ್ನನ್ನು ಸಜ್ಜನರ ಸಂಗದಲ್ಲಿರಿಸು' ಎಂದು ವಿನಂತಿಸುತ್ತಲೇ ಗುರುನಿಂದೆ–ಪರನಿಂದೆ ಮಾಡುವವರು, ನಾಡಿನೊಳಗನ್ಯಾಯ ಮಾಡುವವರು, ಬೇಡಿದರೂ ಕೊಡದಿರುವ ಕಡುಲೋಭಿಗಳು, ಮೂಢ–ಮೂರ್ಖರುಗಳ ಸಹವಾಸದಿಂದ ದೂರವಿರುವಂತೆ ಎಚ್ಚರಿಸುತ್ತಾರೆ. ಸಮಾಜದಲ್ಲಿ ಮನುಷ್ಯನು ಬಾಳಿ–ಬದುಕಲು ಅಸನ–ವಸನಾದಿಗಳು ಅಗತ್ಯ ಮತ್ತು ಅನಿವಾರ್ಯ. ಹಾಗೆಂದ ಮಾತ್ರಕ್ಕೆ ಅವನ ಬದುಕಿನ ಉದ್ದೇಶ ಕೇವಲ ಹೊಟ್ಟೆ–ಬಟ್ಟೆಗಳ ಸುಖಕ್ಕಷ್ಟೇ ಸೀಮಿತವಲ್ಲ. ಈ ಅಂಶವನ್ನು ಕನಕದಾಸರು 'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ' ಎಂಬ ಕೀರ್ತನೆಯಲ್ಲಿ ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ. 'ಮನುಷ್ಯ ಬದುಕುವುದಕ್ಕಾಗಿ ತಿನ್ನಬೇಕೇ ಹೊರತು ತಿನ್ನುವುದಕ್ಕಾಗಿ ಬದುಕುವುದಲ್ಲ' ಎಂಬ ತತ್ವ ಕನಕದಾಸರದು! ಸಮಾಜದಲ್ಲಿ ಮನುಷ್ಯ ತನ್ನ ಬದುಕು ಕಟ್ಟಿಕೊಳ್ಳುವ ಸಲುವಾಗಿ ವಾಮಮಾರ್ಗಗಳನ್ನು ಹಿಡಿಯುವುದಲ್ಲ. ಹೊಟ್ಟೆ–ಬಟ್ಟೆಗಾಗಿ ಮಾಡುವ ಕೆಲಸ ಯಾವುದೇ ಇರಲಿ ಅದು ಪ್ರಾಮಾಣಿಕವಾಗಿರಬೇಕೆಂಬ ಆಶಯ ವ್ಯಕ್ತಪಡಿಸುತ್ತಾರೆ.

'ನೆರೆ ತಿಳಿದು ಪೇಳಿ' ಕೀರ್ತನೆಯಲ್ಲಿ ವ್ಯಕ್ತಿಯ ನಡವಳಿಕೆಗಳನ್ನು ಕುರಿತು ಮಾತನಾಡುತ್ತಾರೆ. ಪ್ರತಿಯೊಬ್ಬ ವ್ಯಕ್ತಿ, ತನ್ನ ವ್ಯಕ್ತಿತ್ವ ಅರಿತು ಕರ್ತವ್ಯ ನಿರ್ವಹಿಸದಿದ್ದರೆ ಅಂತಹ ವ್ಯಕ್ತಿಗಳಿಂದ ಸಮಾಜವೂ ಅಸ್ತವ್ಯಸ್ತಗೊಳ್ಳುತ್ತದೆ ಎಂಬುದನ್ನು ಸೂಕ್ತ ಹೋಲಿಕೆಗಳ ಮೂಲಕ ನಾಟಕೀಯವಾಗಿ ನಿರೂಪಿಸಿದ್ದಾರೆ. 'ದೇವರಿಲ್ಲದ ಗುಡಿ, ಭಾವವಿಲ್ಲದ ಭಕುತಿ, ಸೇವೆ ಅರಿಯದ ಧಣಿ, ಧರ್ಮವಿಲ್ಲದ ಅರಸ, ನಿರ್ಮಲವಿಲ್ಲದ ಮನಸು, ಕರ್ಮವಿಲ್ಲದ ಗಂಡು, ಮರ್ಮವಿಲ್ಲದ ಮಾತು, ಸೌಖ್ಯವಿಲ್ಲದ ಊಟ, ಒಕ್ಕಲಿಲ್ಲದ ಊರು, ಕಂಡು ಕರೆಯದ ನಂಟ, ದಂಡಿಗಂಜುವ ಭಂಟ–ಇವರೇ ಮೊದಲಾದವರು ಸುಖೀ ಸಮಾಜ ನಿರ್ಮಾಣಕ್ಕೆ

ಕಂಟಕಪ್ರಾಯರಾಗುತ್ತಾರೆ. ಹಾಗಾಗಿ ಅವರ ವರ್ತನೆಗಳಲ್ಲಿ ಬದಲಾವಣೆಗಳಾಗಬೇಕೆಂಬ ಕಳಕಳಿ ಕನಕದಾಸರದು.'

'ಬಣಗು ದೈವದ ಗೊಡವೆ ಬೇಡ ಕೀರ್ತನೆಯಲ್ಲಿ ಮೂಢನಂಬಿಕೆ, ಕಂದಾಚಾರಗಳ ಆಚರಣೆಯ ವಿಡಂಬನೆ ಎದ್ದು ಕಾಣುತ್ತದೆ.'

*"ಎಕ್ಕನಾತಿಯರು, ಕಾಟ, ಜಕ್ಕಿಯರು, ಕನ್ನೆಯರು*
*ಸೊಕ್ಕಿನಿಂದ ಸೊಂಟ ಮುರುಕ ಬೈರೇ ದೇವರು*
*ಮಿಕ್ಕಿ ಮಾರಿ ಮಸಣಿ ಚೌಡಿ ಮೈಲಾರಿ ಮೊದಲಾದ*
*ಠಕ್ಕು ದೈವದ ಗೊಡವೆ ಬೇಡ ನರಕ ತಪ್ಪದು*

*ಸುತ್ತಣವರ ಮಾತಕೇಳಿ ಗುತ್ತಿಯ ಯಲ್ಲಮ್ಮಗೊಲಿದು*
*ಬತ್ತಲೆದೇವರ ಮುಂದೆ ಬಲಿಯ ನೋಡಿಕೊ*
*ಮತ್ತೆ ಬೇವಿನುಡಿಗೆಯನ್ನು ಅರ್ಥಿಯಿಂದ ಉಟ್ಟುಕೊಂಡು*
*ಮುಕ್ತಿಕಾಂಬೆವೆಂಬ ಆಸಕ್ತಿ ಬೇಡಿರೊ*

........................................................

........................................................

*ಕೋಣ ಕುರಿಯ ಏಳ ಬೀಳ ಕೊರಳ ಕೊಯಿದು*
*ಬೀಳಬೇಡಿ ನರಕಕೆಂದು ಹೇಳಿಬಂದೆನೊ"* ***(ಈಸಬೇಕು ಇದ್ದು ಜೈಸಬೇಕು: ಪುಟ–51)***

ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಏನೆಲ್ಲ ಸಂಪ್ರದಾಯಗಳನ್ನು ಹುಟ್ಟುಹಾಕಿಕೊಳ್ಳುತ್ತ ಅಂಧಕಾರದ ಕೂಪದಲ್ಲಿ ಮುಳುಗಿ ಸಲ್ಲದ ಆಚರಣೆಗಳಿಗೆ ಅಣಿಯಾಗುತ್ತಾನೆ. ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಚಲಿತವಿದ್ದ ಹತ್ತಾರು ದೇವರುಗಳ ಹೆಸರಿನಲ್ಲಿ ಹರಕೆ ಕಟ್ಟಿಕೊಂಡು ಪ್ರಾಣಿ ಹಿಂಸೆ ಮಾಡುವ ಬಲಿ ಸಂಪ್ರದಾಯವನ್ನು ಕಟುವಾಗಿ ವಿರೋಧಿಸುತ್ತಾರೆ. ಒಲವು ಬಂದತ್ತ ಕಂಡ ಕಂಡ ದೇವರಿಗೆ ಕೈ ಮುಗಿದು ಹರಕೆ ಹೊರುವ ಚಂಚಲ ಮನಸ್ಸಿನ ಜನಸಾಮಾನ್ಯ ಮೂಢ–ಮುಗ್ಧ ಭಕ್ತರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಪೂಜೆ–ಪುನಸ್ಕಾರದ ನೆಪದಲ್ಲಿ ಅನಗತ್ಯ ವೆಚ್ಚ ಮಾಡುವ ವಿಧಾನಗಳನ್ನು ಟೀಕಿಸುತ್ತಾರೆ.

'ತನ್ನ ಪ್ರಾಪ್ತಿಯ ಫಲವ ತಾನರಿಯದೆ ಅನ್ಯರಿಗೆ ಆಡುವುದು ಅವಗುಣವು ಮರುಳೆ' ಕೀರ್ತನೆಯಲ್ಲಿ ವೈಯಕ್ತಿಕ ಜವಾಬ್ದಾರಿ ಕುರಿತು ಚರ್ಚಿಸಿದ್ದಾರೆ. ಮನುಷ್ಯ ತಾನು ನಿರ್ವಹಿಸುವ ಕೆಲಸ–ಕಾರ್ಯಗಳಿಗೆ ತಾನೇ ಜವಾಬ್ದಾರನು. ಅದು ಬಿಟ್ಟು ತನ್ನ ದೌರ್ಬಲ್ಯಕ್ಕೆ ಪರರನ್ನು ನಿಂದಿಸುವುದು ಯಾವ ನ್ಯಾಯ? ಮನುಷ್ಯರು ತಮ್ಮ ಬದುಕನ್ನು ತಾವು ಹೇಗೆ ರೂಪಿಸಿಕೊಳ್ಳುತ್ತಾರೋ ಹಾಗೆ ಸಮಾಜದಲ್ಲಿ ಅವರ ಇರವು. ಸಮರ್ಪಕವಾದ ಯೋಚನೆ, ನ್ಯಾಯಯುತ ಯೋಜನೆಗಳಿಂದ ಪ್ರತಿಯೊಬ್ಬರೂ ತಮ್ಮ ಭವಿಷ್ಯವನ್ನು ಕಟ್ಟಿಕೊಳ್ಳುವಂತಾಗಬೇಕು. 'ದೆಸೆಗೆಟ್ಟು ನಾಡದೈವಂಗಳಿಗೆ ಹಲುಬಿದೊಡೆ ನೊಸಲ ಬರಹವ ತೊಡೆದು ತಿದ್ದಲಳವೆ?' ಎಂದು ಪ್ರಶ್ನಿಸುವ ಕನಕದಾಸರು ಸತ್ಯದ ಸನ್ಮಾರ್ಗದಲ್ಲಿ ನಡೆದರೆ ಮಾತ್ರ ಉತ್ತಮ ಬದುಕು ನಿರ್ವಹಿಸಲು ಸಾಧ್ಯವೆನ್ನುತ್ತಾರೆ.

ಉನ್ನತ ಕುಲದವರ ಸ್ವಾರ್ಥ ಬದುಕನ್ನು ಕಂಡು ಕಟುವಾಗಿ ಟೀಕಿಸುವ ಕನಕದಾಸರು 'ತೀರ್ಥವನು ಪಿಡಿದವರೆಲ್ಲ ತಿರುನಾಮದಾರಿಗಳೆ' ಎಂಬ ಕೀರ್ತನೆಯಲ್ಲಿ 'ಪಚ್ಚೆ ನಾಮವ ಬಳಿದು. ಗುಟ್ಟಿನಲ್ಲಿ ಜಪಿಸುವ ಗುಟ್ಟರಿಯದ ಕೆಟ್ಟ ಕೂಗನುಕೂಗಿ ಹೊಟ್ಟೆ ಹೊರೆಯುವಂತಹ ವೈಷ್ಣವರನ್ನು 'ಲಿಂಗಾಂಗದೊಳಗಿರುವ ಚಿನುಮಯವ ತಿಳಿಯದೆ, ಅಂಗ–ಲಿಂಗದ ನೆಲೆಯ ಗುರುತರಿಯದೆ, ಜಂಗಮ–ಸ್ಥಾವರಗಳ ಹೊಲಬನರಿಯದ ಭಂಗಿ ಮುಕ್ಕುಗಳೆಲ್ಲ ಲಿಂಗವಂತರೆ? ಎಂದು ಶೈವರನ್ನು 'ಅಲ್ಲಾ ಖುದಾ ಎಂಬ ಅರ್ಥ ತಿಳಿಯದೆ, ಮುಲ್ಲಾ ಶಾಸ್ತ್ರದ ನೆಲೆಯ ಗುರುತರಿಯದೆ ಕಳ್ಳ ಕೂಗನೆ ಕೂಗಿ, ಬೊಗಳಿ ಬಾಯ್ದೆರೆವಂಥವರಿಗೆ ವೀರಸ್ವರ್ಗ ದೊರಕುವುದೆ?' ಎಂದು ಇಸ್ಲಾಂ ಧರ್ಮದವರನ್ನು ಆಯಾ ಧಾರ್ಮಿಕ ಪರಿಭಾಷೆಗಳಲ್ಲಿಯೇ ನಿರೂಪಿಸಿ ಎಚ್ಚರಿಸುವ ರೀತಿ ಅನನ್ಯವಾದುದು.

"ಕನಕದಾಸರು ತಮ್ಮ ಸಮಕಾಲೀನ ಒಟ್ಟು ಸಮಾಜದ ಎಲ್ಲ ನೆಲೆಗಳ ಪ್ರಾಮಾಣಿಕ ಅನ್ವೇಷಣೆಗೆ ತೊಡಗಿ. ಆ ಎಲ್ಲ ನೆಲೆಗಳ ಸ್ವರೂಪವನ್ನು ಒಟ್ಟು ಸಾಂಸ್ಕೃತಿಕ ಹಾಗೂ ಮಾನವೀಯ ಪ್ರಜ್ಞೆಯ ಹಿನ್ನೆಲೆಯಲ್ಲಿ, ತಮ್ಮ ಪ್ರತ್ಯಕ್ಷ ಅನುಭವ–ಚಿಂತನೆ, ಕಳಕಳಿ–ಕಾಳಜಿಗಳ ಮೂಲಕ ಒಂದು ಘನವಾದ ಉದ್ದೇಶಕ್ಕಾಗಿ ಶೋಧಿಸಿ ಕೊಡುವುದರಿಂದ ಅವರ ಕೀರ್ತನೆಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. ನಮ್ಮ ಸಮಕಾಲೀನ ಸಾಮಾಜಿಕ ಹಾಗೂ ಸಾಹಿತ್ಯಕ ಸಂದರ್ಭದ ಹಿನ್ನೆಲೆಯಲ್ಲಿಯೂ ಹೊಸ ಹೊಸ ಅರ್ಥವನ್ನು ವ್ಯಂಜಿಸುತ್ತಲೇ ಹೆಚ್ಚಿನ ಹುಡುಕಾಟಕ್ಕೆ ಪ್ರೇರೇಪಿಸುತ್ತವೆ"[4] ಲೋಕಾನುಭವಿಗಳಾದ ಕನಕದಾಸರಿಗೆ ವಿಷಯದ ಸಮರ್ಥನೆಗಳಿಗೆ ಬೇಕಾದ ನಿದರ್ಶನಗಳಿಗಾಗಿ ತಡಕಾಡಬೇಕಿಲ್ಲ. 'ಏನುಯಿಲ್ಲದ ಎರಡು ದಿನದ ಸಂಸಾರ'ದಲ್ಲಿ ದಾನ–ಧರ್ಮವ ಮಾಡಿರಯ್ಯ' ಎಂದು ಹೇಳುವ ಮೂಲಕ ಶಕ್ತರು, ಅಶಕ್ತರನ್ನು ಕಾಣಬೇಕಾದ ಮಾರ್ಗ ಸೂಚಿಸಿದ್ದಾರೆ. 'ಕಲಿಯುಗದ ಮಹಿಮೆಯನು ಕಂಡಷ್ಟು ಹೇಳುವೆನು' ಎನ್ನುವ ಅವರು ಸಮಾಜದಲ್ಲಿನ ಭ್ರಷ್ಟಾಚಾರಗಳ ಕಡೆಗೆಲ್ಲ ಬೆಳಕು ಚೆಲ್ಲಿದ್ದಾರೆ. ಕಷ್ಟದಿಂದ, ಬಡತನದಿಂದ ಹತಾಷರಾದವರಿಗೆ ಆತ್ಮ–ವಿಶ್ವಾಸದ ನಿದರ್ಶನಗಳಿಂದ ನೆಮ್ಮದಿಯ ನೀತಿ ನಿರೂಪಿಸಿದ್ದಾರೆ.

ಸಮಾಜದ ಮೂಲ ಘಟಕವಾದ ವ್ಯಕ್ತಿ, ಉತ್ತಮ ಸಮಾಜ ನಿರ್ಮಾಣಕ್ಕಾಗಿ ಸಂಸ್ಕಾರವಂತನಾಗಿ ತನ್ನ ಅಂತರಂಗ–ಬಹಿರಂಗಗಳ ಪರಿಶುದ್ಧತೆಗಾಗಿ ಶ್ರಮಿಸಬೇಕು. ಯಾವ ಕಾರಣಕ್ಕೂ ಅವನು ಇಹದ ಬದುಕನ್ನು ಕಡೆಗಣಿಸಬಾರದು. ಬದುಕಿರುವವರೆಗೆ ತನ್ನ ದೇಹ ಮತ್ತು ಮನಸ್ಸುಗಳನ್ನು ಪರಿಶುದ್ಧವಾಗಿರಿಸಿಕೊಂಡಿರಬೇಕು. ಕ್ಷಣಿಕ ಸುಖದ ಆಸೆ–ಆಮಿಷಗಳಿಗೆ ಬಲಿಯಾಗದೆ "ಶಿಸ್ತು–ಸಂಯಮ–ಹಿತಮಿತ ಭೋಗಗಳನ್ನು ಮನುಷ್ಯ ಪಾಲಿಸಬೇಕು. ಇಲ್ಲದಿದ್ದರೆ ವ್ಯಕ್ತಿಯು ಸ್ವಾರ್ಥಿ, ಕ್ರೂರಿ, ನೀಚನಾಗಿ ಸಮಾಜದಲ್ಲಿ ಪರಪೀಡಿತನಾಗುವನು"[5] ಹೀಗಾಗದಂತೆ ಮನುಷ್ಯನು ಅಂತಃಪ್ರಜ್ಞೆಯಿಂದ ವರ್ತಿಸಬೇಕಾದದ್ದು ಅಗತ್ಯವಾಗಿದೆ ಎಂಬ ತಿಳುವಳಿಕೆ ಕನಕದಾಸರ ಕೀರ್ತನೆಗಳಲ್ಲಿ ದಟ್ಟವಾಗಿ ಗೋಚರಿಸುವುದು.

ಕನಕದಾಸರ "ನೀತಿ ಬೋಧನೆ ಹೆಚ್ಚು ಮಟ್ಟಿಗೆ ನೇರವಾದುದು. ಹಾಗೆಂದ ಮಾತ್ರಕ್ಕೆ ವಾಚ್ಯ ಶೈಲಿಯದಲ್ಲ. ಉಪಮೆ–ರೂಪಕ–ವ್ಯಂಜಕತೆಗಳ ಸೊಗಸಾದ ಶೈಲಿಯಲ್ಲಿ, ಹಾಡಿನ ಮಧುರಗತ್ತಿನಲ್ಲಿ, ಅನುನಯದ ಆತ್ಮೀಯ ಧಾಟಿಯಲ್ಲಿ ಅವರ ಕೀರ್ತನೆಗಳು ಮೂಡಿಬಂದಿವೆ. ಮಾನವ ಸ್ವಭಾವದ ಎಲ್ಲ ಕಾಲದ ಗುಣಾವಗುಣಗಳು ನಿದರ್ಶನ ರೂಪದಲ್ಲಿ ಬಂದಿರುವಂತೆ, ನೇರವಾದ ವಿಮರ್ಶೆಗೂ ಪಕ್ಕಾಗಿವೆ. ಕಾಲ ಬದಲಾದರೂ ಮನುಷ್ಯ ಸ್ಥಿತಿ ಬದಲಾಗಿಲ್ಲ; ಸಮಾಜದ ಐಹಿಕ ರೂಪ ವ್ಯವಸ್ಥೆ ಬದಲಾದರೂ

ಮಾನವ ಅಂತರಂಗ ಪೋಷಿಸಿ ಉಳಿಸಿದವರು. ಅವರ ಪ್ರಿಯ ಶಿಷ್ಯರಾದ ಮಾರ್ಪಟ್ಟಿಲ್ಲ. ಅಂತರಂಗದ ಜೀವನ ಸ್ವಯಂ ಸ್ಫೂರ್ತಿಯಿಂದ ಬದಲಾಗಬೇಕೆಂಬ ದಾಸರ ಹಂಬಲ, ಅವರ ಕೀರ್ತನ ಸಾಹಿತ್ಯಕ್ಕೆ ನಿರಂತರತೆಯ ಮೌಲ್ಯವನ್ನು ಸರ್ವಕಾಲೀನತೆಯ ಮಹತ್ವವನ್ನೂ ತಂದುಕೊಟ್ಟಿವೆ".[6]

ಕನಕದಾಸರು ಕೀರ್ತನೆಗಳಲ್ಲಷ್ಟೇ ಅಲ್ಲ; ಅವರು ತಮ್ಮ ಇತರ ಸಾಹಿತ್ಯ ಕೃಷಿಯಲ್ಲೂ ಸಾಮಾಜಿಕ ಚಿಂತನೆಯನ್ನು ಪ್ರಧಾನಮಾಡಿ ಭಕ್ತಿಯ ಹಿನ್ನೆಲೆಯಲ್ಲಿ ಸುಖೀ ಸಮಾಜ ನಿರ್ಮಾಣ ಮಾಡಲು ಹೊರಟವರು. ಸಮಾಜದ ಸ್ವರೂಪದ ಬಗ್ಗೆ ಚಿಂತಿಸುವಾಗ "ಅವರು ನೀಡುವ ನಿದರ್ಶನಗಳು, ದೃಷ್ಟಾಂತಗಳು, ಸ್ವಭಾವ ಚಿತ್ರಣಗಳು, ರೂಪಕಗಳು ಸ್ಪಷ್ಟವಾಗಿ ಅಂದಿನ ಮತ್ತು ಪರೋಕ್ಷವಾಗಿ ಇಂದಿನ ಸಮಾಜದ ಸ್ಥಿತಿ–ಗತಿಯನ್ನೇ ಪ್ರತಿನಿಧಿಸುತ್ತವೆ"[7] ಈ ಕಾರಣದಿಂದಾಗಿಯೇ ಹದಿನಾರನೆಯ ಶತಮಾನದ ಕನಕದಾಸರ ಸಮಾಜಮುಖಿ ಚಿಂತನೆಗಳು ಇಂದಿಗೂ ಪ್ರಸ್ತುತವೆನಿಸಿರುವುದು.

**ಅಡಿಟಿಪ್ಪಣಿಗಳು**

1. ವನಜಾಕ್ಷಿ ಹಳ್ಳಿಯವರ, ಕಾವ್ಯಕಲ್ಪ (ಸಂ), ಪು.162
2. ದೇ.ಜವರೇಗೌಡ, ಕನಕಾವಲೋಕನ (ಸಂ) ಪು.774
3. ಎಚ್.ಎಸ್.ವೆಂಕಟೇಶಮೂರ್ತಿ, ಕೀರ್ತನಕಾರರು, ಪು.77
4. ದೇ. ಜವರೇಗೌಡ (ಸಂ), ಕನಕಾವಲೋಕನ, ಪು.799
5. ಶ್ಯಾಮಸುಂದರ ಬಿದರಕುಂದಿ (ಸಂ), ಈಸಬೇಕು ಇದ್ದು ಜಯಿಸಬೇಕು, ಪು.xv
6. ಅದೇ, ಪು.xvi
7. ಶಿವಾನಂದ ಕೆಳಗಿನ ಮುನಿ (ಸಂ), ಕೀರ್ತನೆಗಳ ಸಂಗ್ರಹ. ಪು.22

**ಪರಾಮರ್ಶನ ಗ್ರಂಥಗಳು**


- ತ.ಸು. ಶಾಮರಾಯ. (2014). ಕನ್ನಡ ಸಾಹಿತ್ಯ ಚರಿತ್ರೆ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ದೇ.ಜವರೇಗೌಡ (ಸಂ). (2012). ಕನಕಾವಲೋಕನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
- ವೆಂಕಟೇಶಮೂರ್ತಿ. ಎಚ್.ಎಸ್. (ಸಂ). (2010). ಕೀರ್ತನಕಾರರು, ಸಪ್ನಬುಕ್ ಹೌಸ್, ಬೆಂಗಳೂರು.
- ಶ್ಯಾಮಸುಂದರ (ಸಂ). (1989). ಬಿದರಕುಂದಿ, ಈಸಬೇಕು ಇದ್ದು ಜಯಿಸಬೇಕು, ಆಲೋಚನ ಪ್ರಕಾಶನ, ಗದಗ.
- ವನಜಾಕ್ಷಿ ಹಳ್ಳಿಯವರ. (ಸಂ). (2008). ಕಾವ್ಯಕಲ್ಪ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
- ಪ್ರಧಾನ ಗುರುದತ್ತ. (ಸಂ) (2000). ಪ್ರಥಮ ಬಿ.ಎ. ಐಚ್ಛಿಕ ಕನ್ನಡ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.
- ಶಿವಾನಂದ ಕೆಳಗಿನಮನಿ. (ಸಂ). (2008). ಕೀರ್ತನೆಗಳ ಸಂಗ್ರಹ, ಎಸ್. ಬಿ. ಡಿ. ಪ್ರಕಾಶನ.